# 3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,ರವರ ನ್ಯಾಯಾಲಯ, ಕಡೂರು.

**ಸಿ.ಸಿ.ನಂ.4069/2023**

**ದಿನಾಂಕಃ 24.08.2024**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ ಬೀರೂರು  ಪೊಲೀಸರಿಂದ

**-ವಿರುದ್ಧ-**

**ಆರೋಪಿ/ತರು** ಃ ಶಶಾಂಕ್ ಸಿ.ಎಸ್. ಬಿನ್ ಶಿವನಂಜೇಗೌಡ,
22 ವರ್ಷ,
ವಾಸಃ ಚಿಕ್ಕಡಲೂರು ಗ್ರಾಮ,
ದುದ್ದ ಹೋಬಳಿ, ಹಾಸನ ತಾಲ್ಲೂಕು.

**-:ಆಪಾದನೆಃ-**

ದಿನಾಂಕ 18.08.2023 ರಂದು ಮಧ್ಯಾಹ್ನ 3-00 ರ ಸಮಯದಲ್ಲಿ, ಬೀರುರು ಠಾಣಾ ವ್ಯಾಪ್ತಿಯ ಅಭಿಷೇಕ್ ಸಾಮಿಲ್ ಎದುರು ಹಾದು ಹೋಗಿರುವ ಎನ್.ಹೆಚ್.-206 ರಸ್ತೆಯಲ್ಲಿ ಮೃತ ಅಶೋಕ ರವರು ಕೆಎ-66/ಈ-6312 ರ ಬೈಕನ್ನು ಚಾಲನೆ ಮಾಡಿಕೊಂಡು ಕಡೂರು ಕಡೆಯಿಂದ ಬೀರೂರು ಕಡೆಗೆ ಹೋಗುವ ಸರ್ವಿಸ್ ರಸ್ತೆಯಲ್ಲಿ ಬರುತ್ತಿರುವಾಗ, ಆರೋಪಿಯಾದ ನೀವು ಕೆಎ-51/ಎಜಿ-0881 ಟ್ಯಾಂಕರ್ ಲಾರಿಯನ್ನು ಸಾರ್ವಜನಿಕ ರಸ್ತೆಯಲ್ಲಿ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಲಾರಿಯ ಬಲಭಾಗದ ಸೈಡ್ ನಿಂದ ಬೈಕಿಗೆ ಡಿಕ್ಕಿಪಡಿಸಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯಾದ ನೀವು ಮೃತ ಅಶೋಕ ರವರಿಗೆ ಡಿಕ್ಕಿ ಹೊಡೆಸಿದರ ಪರಿಣಾಮ ಲಾರಿ ಹಿಂಬದಿ ಚಕ್ರಕ್ಕೆ ಸಿಲುಕಿಕೊಂಡು, ಲಾರಿ ಚಕ್ರವು ಅಶೋಕ ರವರ ಮೇಲೆ ಹರಿದಿದ್ದರಿಂದ ತಲೆಗೆ, ಎದೆ ಮತ್ತು ಹೊಟ್ಟೆಗೆ, ಕೈಕಾಲಿಗೆ ಪೆಟ್ಟಾಗಿ ತೀವ್ರ ಸ್ವರೂಪದ ರಕ್ತಸ್ರಾವವಾಗಿ ಮೃತಪಟ್ಟಿರುತ್ತಾರೆ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯಾದ ನೀವು ಮೇಲೆ ಹೇಳಿದ ರೀತಿ ಅಪಘಾತಪಡಿಸಿ, ಪೊಲೀಸರಿಗೆ ಮಾಹಿತಿ ನೀಡದೇ ಮತ್ತು ಗಾಯಾಳಿಗೆ ಪ್ರಥಮ ಚಿಕಿತ್ಸೆ ನೀಡದೆ ಸ್ಥಳದಿಂದ ಪರಾರಿಯಾಗಿದ್ದು, ಆದ್ದರಿಂದ ನೀವು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರಶ್ನೆ-1ಃ ನಿಮಗೆ ಈಗ ಓದಿ ಹೇಳಲಾದ ಆರೋಪವು ತಿಳಿಯಿತೆ?

ಉತ್ತರಃ ಹೌದು

ಪ್ರಶ್ನೆ-2ಃ ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿ ಕೊಳ್ಳುವಿರೋ ಅಥವಾ ಪ್ರತಿರಕ್ಷೆ ಇದೆಯೇ?

ಉತ್ತರಃ ಪ್ರತಿರಕ್ಷೆ ಸಾಕ್ಷಿ ಇದೆ.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-

(ತಾಹಾಕಲೀಲ್ ಕೆ.ಎ)

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ